ದಿನಾಂಕ : 08-07-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನಾನು ವ್ಯವಸಾಯ ಮಾಡುತ್ತಿದ್ದೇನೆ . ಮತ್ತೋಡ್ ಸಿಮೆಂಟ್ ಕಾರ್ಖಾನೆಯಲ್ಲಿ ನಾನು 1992 ರಿಂದ 2019-20 ರವರೆಗೆ ಕೆಲಸ ಮಾಡಿದ್ದೇನೆ . ಆ ಸಮಯ ನಾನು ಕಪ್ಪನಾಯಕನಹಳ್ಳಿ ಹೊಸದುರ್ಗ ತಾಲ್ಲೂಕು ಚಿತ್ರದುರ್ಗ ಜಿಲ್ಲೆಯಲ್ಲಿ ವಾಸವಿದ್ದೆ . ನಾನು ಚೆಕ್ಕುಗಳ ಮೇಲೆ ಆಂಗ್ಲಭಾಷೆಯಲ್ಲಿ ಸಹಿ ಮಾಡುತ್ತೇನೆ . ನಾನು ಮುಖ್ಯ ವಿಚಾರಣೆ ಪ್ರಮಾಣ ಪತ್ರದ ವಿಚಾರಗಳನ್ನು ತಿಳಿದುಕೊಂಡಿದ್ದೇನೆ . 1 ನೇ ಪ್ರತಿವಾದಿಯು ಪ್ರಮಾಣ ಪತ್ರಕ್ಕೆ ವಿವರಗಳನ್ನು ನೀಡಿ ತಯಾರಿಸಿದ್ದರು ನಾನು ಬಂದು ಸಹಿ ಮಾಡಿದ್ದೇನೆ ಎಂದರೆ ಸರಿ . ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸರ್ವೆ ನಂ. 17 ರಲ್ಲಿ 23 ಗುಂಟೆ ವಿಸ್ತೀರ್ಣ ಇದೆ ಎಂದು ತಿಳಿಸಿದ್ದು, ಅದು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ . ಅದು ಯಾವ ಊರಿನಲ್ಲಿದೆ ಎಂದರೆ ಸಾಕ್ಷಿಯು ಅರೇನಹಳ್ಳಿ ಗ್ರಾಮದಲ್ಲಿದೆ , ಸರ್ವೆ ನಂಬರ್ ಬಗ್ಗೆ ಮಾಹಿತಿ ಇಲ್ಲ ಎಂದು ತಿಳಿಸಿದ್ದಾರೆ . ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಯಾವ ಯಾವ ಸರ್ವೆ ನಂಬರ್ ಸ್ವತ್ತುಗಳ ಬಗ್ಗೆ ಬರೆಯಲಾಗಿದೆ ಎಂದು ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ .

ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವ ವಿಭಾಗವು 1991 ನೇ ಸಾಲಿನಲ್ಲಿ ನಡೆದಿದೆ . ಸದರಿ ವಿಭಾಗ ಪತ್ರಕ್ಕೆ ಯಾರು ಯಾರು ಸಹಿ ಮಾಡಿದ್ದಾರೆ , ಯಾರು ಯಾರು ಎಡಗೈ ಹೆಬ್ಬರಳಿನ ಗುರುತು ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ . ಯಾವುದೇ ಒಬ್ಬ ವ್ಯಕ್ತಿಯು ಯಾವುದಾದರೂ ದಾಖಲೆಗೆ ಸಾಕ್ಷಿಯಾಗಿ ಸಹಿ ಮಾಡಿದ್ದಲ್ಲಿ ಅವರ ವಿಳಾಸವನ್ನು ಸಹಾ ನಮೂದಿಸುತ್ತಾರೆ ಎಂದರೆ ಸರಿ . ವಿಭಾಗ ಪತ್ರಕ್ಕೆ 5 ಜನ ಸಾಕ್ಷಿಗಳಾಗಿ ಸಹಿ ಮಾಡಿ ಅವರ ವಿಳಾಸವನ್ನು ಬರೆದಿದ್ದಾರೆ . ನಾನು ವಿಭಾಗ ಪತ್ರಕ್ಕೆ ಸಹಿ ಮಾಡಿದ ನಂತರ 4 ಜನ ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ . ಸದರಿ 4 ಜನರು ಯಾರೆಂದರೆ ಗುಬ್ಬಣ್ಣ , ಜಯಣ್ಣ ,ಚನ್ನಬಸಪ್ಪ ಹಾಗೂ ಬಸವರಾಜು .

ಸದರಿ ವಿಭಾಗ ಪತ್ರದಲ್ಲಿ ಯಾವ ಯಾವ ಊರಿನ ಯಾವ ಯಾವ ಸ್ವತ್ತುಗಳನ್ನು ಸೇರಿಸಲಾಗಿದೆ ಎಂಬ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ. 1 ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಬಂದು ಈ ರೀತಿ ಸಾಕ್ಷಿ ನುಡಿಯಲು ಹೇಳಿದ ಕಾರಣ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ . ನನಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ , 1 ನೇ ಪ್ರತಿವಾದಿಯು ಹೇಳಿಕೊಟ್ಟಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .